# ಶ್ರಾವಣ ದರ್ಶನ : 7ನೇ ದಿನದ ಕಾರ್ಯಕ್ರಮ

**ಚಿತ್ರದುರ್ಗ ಜು. 27** : ಸಾಧನೆ ಕೆಲವರಿಗೆ ಮಾತ್ರ ಸೀಮಿತವಾಗಬಾರದು. ಬುದ್ಧ, ಏಸು, ಪೈಗಂಬರ್, ಬಸವಣ್ಣ ಕಂಡಂತಹ ಸಮಾಜ ನಮ್ಮದಾಗಬೇಕು. ಅಂದರೆ ಪ್ರತಿಯೊಬ್ಬರೂ ಸಮಸಮಾಜದ ವ್ಯಾಪ್ತಿಗೆ ಬರಬೇಕು. ರಾಷ್ಟ್ರದ ಕಟ್ಟಕಡೆಯ ವ್ಯಕ್ತಿಗೂ ಮೂಲಭೂತ ಅವಶ್ಯಕತೆಗಳು ದೊರೆಯಬೇಕೆಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಮುರುಘಾಮಠದಲ್ಲಿ ಭಾನುವಾರ ನಡೆದ ಶ್ರಾವಣದರ್ಶನ ಏಳನೇ ದಿನದ ಫೇಸ್‌ಬುಕ್ ಮತ್ತು ಯುಟ್ಯೂಬ್ ಲೈವ್ ಕಾರ್ಯಕ್ರಮದಲ್ಲಿ ಬದುಕು ಹಾಗೂ ಬದಲಾವಣೆ ವಿಷಯ ಕುರಿತು ಮಾತನಾಡಿದ ಅವರು, ಜಗತ್ತಿನಲ್ಲಿ ಜನಿಸಿದ ಪ್ರತಿಯೊಬ್ಬರಿಗೂ ಬದುಕು ಇದೆ. ಬದುಕು ಒಂದು; ಬದುಕನ್ನು ನಡೆಸುವ ದಾರಿಗಳು ಹಲವಾರು. ಒಬ್ಬೊಬ್ಬರ ಬದುಕಿನ ವಿಧಾನವು ಒಂದೊಂದು ರೀತಿ ಇದೆ. ಭಿನ್ನ ಭಿನ್ನವಾಗಿದೆ.

ಬದುಕು ಮೊದಲನೆಯದು, ಬದಲಾವಣೆ ಎರಡನೆಯದು. ಆಂತರ್ಯವನ್ನು ಪ್ರವೇಶಿಸಿದಂತೆ ಬದುಕು ಅದೆಷ್ಟು ವಿಶಾಲವಾಗಿದೆ ಅನ್ನುವ ಅರಿವು ನಮಗಾಗುತ್ತದೆ. ಬಗೆಬಗೆಯ ಬದುಕು, ಬಣ್ಣಬಣ್ಣದ ಬದುಕು. ಒಬ್ಬರ ಬದುಕಿನ ಕ್ರಮದಂತೆ ಇನ್ನೊಬ್ಬರ ಬದುಕಿನ ಕ್ರಮ ಇಲ್ಲ. ಹಾದಿಗಳು ಸಾವಿರಾರು. ಕೆಲವರ ದೃಷ್ಟಿಯಲ್ಲಿ ಬದುಕು ಅಂದರೆ ಕೆಣಕುವುದು. ಅಪಹಾಸ್ಯಕ್ಕಾಗಿ ಬಳಸಿಕೊಳ್ಳಲಾಗುತ್ತದೆ. ಮತ್ತೊಬ್ಬರ ದೃಷ್ಟಿಯಲ್ಲಿ ಅದಕೆ ಕೆಡಕು. ಬದುಕು ಎಂದರೆ ಬೆದಕು. ಬದುಕು ಎಂದರೆ ಹುಡುಕುವುದು. ಕೆಲವರು ಹುಡುಕುತ್ತಾರೆ ಅದು ಸಿಗುವುದಿಲ್ಲ. ಎಲ್ಲ ಇದ್ದವರು ನೆಮ್ಮದಿಯನ್ನು ಹುಡುಕುತ್ತಾರೆ. ಆ ತೃಪ್ತಿ ಎಲ್ಲಿದೆ. ಶಾಂತಿಯ ಹುಡುಕಾಟ. ಕೆಲವರ ದೃಷ್ಟಿಯಲ್ಲಿ ಬದುಕು ಎಂದರೆ ಬೆಳಕು. ಪ್ರಕಾಶಮಾನವಾದುದು. ಅಂಧಕಾರದಲ್ಲಿ ಪ್ರಕಾಶ ಕಾಣುವವರು ಇದ್ದಾರೆ. ಪ್ರಕಾಶದೊಳಗೆ ಅಂಧಕಾರವನ್ನು ಕಾಣುವವರು ಇದ್ದಾರೆ. ಅಂಥವರಿಗೆ ಬದುಕು ಬೆಳಕು. ಇನ್ನು ಕೆಲವರಿಗೆ ಬದುಕು ಎಂದರೆ ಚುಳುಕು. ಜಾಗೃತಿಯ ಚುಳುಕು. ಬದುಕನ್ನು ಸಂಚಲನಗೊಳಿಸುವುದು. ಮಾಂಸದ ಮುದ್ದೆಯಂತಿರುವುದು ಬದುಕು ಅಲ್ಲ. ಚುರುಕಾಗಿರುವುದು, ಲವಲವಿಕೆಯಿಂದಿರುವುದು. ಜೀವನ ಎಂದರೆ ಉತ್ಸಾಹ. ಇದು ಬೌದ್ಧಿಕಯಾನ. ಶಬ್ದಗಳಿಗೆ ನಿಲುಕಲಾರದೆ ಇರುವಂತಹ ಬದುಕು ನಮ್ಮದಾಗಬೇಕು. ಬದುಕು ಒಂದು ಸುವರ್ಣಾವಕಾಶ. ಬದುಕನ್ನು ಪ್ರಖರವಾಗಿಸುವಂತಹ ಪ್ರಯತ್ನಗಳು ನಡೆಯಬೇಕು. ಬದುಕಿನ ನಾಲ್ಕು ಹಂತಗಳು.

**1) ಬದುಕಿಗಾಗಿ ಬದುಕು :** ವಾಸಿಸಲು ಸೂರು ಇಲ್ಲದವರು, ಬಟ್ಟೆ ಇಲ್ಲದವರು ಬಹಳವಾಗಿ ಇದ್ದಾರೆ. ಬದುಕಿನ ಅವಶ್ಯಕತೆಗಳಿಗಾಗಿ ಇಡೀ ಜೀವನ ಸವೆಸುತ್ತ ಹೋಗುತ್ತಾರೆ. ಸಾಧನೆ ಕೆಲವರಿಗೆ ಮಾತ್ರ ಸೀಮಿತವಾಗಬಾರದು. ಬುದ್ಧ, ಏಸು, ಪೈಗಂಬರ್, ಬಸವಣ್ಣ ಕಂಡಂತಹ ಸಮಾಜ ನಮ್ಮದಾಗಬೇಕು. ಅಂದರೆ ಪ್ರತಿಯೊಬ್ಬರೂ ಸಮಸಮಾಜದ ವ್ಯಾಪ್ತಿಗೆ ಬರಬೇಕು. ರಾಷ್ಟ್ರದ ಕಟ್ಟಕಡೆಯ ವ್ಯಕ್ತಿಗೂ ಮೂಲಭೂತ ಅವಶ್ಯಕತೆಗಳು ದೊರೆಯಬೇಕು. ಜನಸಾಮಾನ್ಯರನ್ನು ಉದ್ಧರಿಸಲು ಜನಪ್ರತಿನಿಧಿಗಳು, ಸಂವಿಧಾನ ಕೆಲಸ ಮಾಡುತ್ತ ಬಂದಿದ್ದಾರೆ.

**2) ಸುಖಕ್ಕಾಗಿ ಬದುಕು :** ಮಾನವ ಜೀವನದ ಕೇಂದ್ರಬಿಂದುವಾಗಿ ಸುಖ ಇದೆ. ಆದರೆ ಎಲ್ಲರಿಗೂ ಸುಖ ಸಿಗುವುದಿಲ್ಲ. ಪರ್ವತದಷ್ಟು ದುಃಖ; ತೃಣದಷ್ಟು ಸುಖ ಆಸ್ವಾದಿಸುವುದು. ಸುಖ ಕ್ಷಣಿಕವಾದುದು. ದೇವರು ಕೊಡುವ ವರಕ್ಕಿಂತ ರಟ್ಟೆ ಕೆಲಸ ಮಾಡುತ್ತದೆ. ನಮ್ಮ ತೋಳಿನಲ್ಲಿ ಅದ್ಭುತವಾದ ಶಕ್ತಿ ಇದೆ. ಅದನ್ನು ಒಳ್ಳೆಯದಕ್ಕಾಗಿ ಬಳಸಿಕೊಂಡರೆ ಬಡತನ ನಮ್ಮಿಂದ ದೂರವಾಗುತ್ತದೆ. ಇದರಿಂದ ಸ್ವಾಭಿಮಾನದ ಬದುಕಾಗುತ್ತದೆ.

**3) ಸಾಧನೆಗಾಗಿ ಬದುಕು :** ಶರೀರ ಇರುವುದು ಸಾಧನೆಗಾಗಿ. ತೇನ್‌ಸಿಂಗ್ ತನ್ನ ಬದುಕನ್ನು ಸಾಧನೆಗಾಗಿ ಬಳಸಿಕೊಂಡನು. ತೇನ್‌ಸಿಂಗ್‌ನನ್ನು ತನ್ನ ಬಗಲಲ್ಲಿ ಎತ್ತಿಕೊಂಡು ತಾಯಿ ಎತ್ತರದ ಶಿಖರವನ್ನು ತೋರಿಸುತ್ತಿದ್ದಳು. ತಾಯಿ ಅವನಿಗೆ ಪ್ರೇರಣೆ ನೀಡುತ್ತಿದ್ದಳು. ತಾಯಿಯಿಂದ ಪ್ರಚೋದನೆ ಅಲ್ಲ, ಅದು ಪ್ರೇರಣೆ. ಆ ಪ್ರೇರಣೆಯಿಂದ ಆ ಎತ್ತರವನ್ನು ಏರಿದ. ಸಾಮಾನ್ಯನಾದ ಆತ

ಇತಿಹಾಸ ಸೃಷ್ಟಿಸಿದ. ಯಾರಲ್ಲಿಯೂ ಅಸ್ಪಷ್ಟತೆ ಇರಬಾರದು. ಯಾರಿಗೆ ಯಾವುದರ ಬಗ್ಗೆ ಆಸಕ್ತಿ ಇರುತ್ತದೆಯೋ ಅದನ್ನು ವಿದ್ಯಾರ್ಥಿಗಳು ಓದಬೇಕು. ಆದರೆ ಪ್ರೀಕ್ಷಕರು ಅವರ ಮೇಲೆ ಒತ್ತಡ ಹೇರಬಾರದು.

**4) ಬದಲಾವಣೆಯ ಬದುಕು :** ಬದುಕು ಕೇವಲ ನಿರ್ವಹಣೆಗೆ ಮಾತ್ರ ಸೀಮಿತವಾಗಬಾರದು. ನಿಸರ್ಗ ಕೊಡುವ ಪಾಠವನ್ನು ನಾವು ಕಲಿಯಬೇಕಿದೆ. ಮಳೆಗಾಲ, ಚಳಿಗಾಲ, ಬೇಸಿಗೆ ಕಾಲ ಹೀಗೆ ಬದಲಾವಣೆ ಹೊಂದುತ್ತದೆ. ಅದೊಂದು ಬದಲಾವಣೆಯ ಪ್ರಕ್ರಿಯೆಗೆ ಒಳಗಾಗುತ್ತದೆ. ಹಾಗೆಯೇ ಮಾನವನೂ ಕೂಡ ಬದಲಾಗಬೇಕು. ಬದಲಾವಣೆ ಸೃಷ್ಟಿಯ ನಿಯಮ, ಬದಲಾವಣೆಯ ಜೊತೆ ಬದುಕನ್ನು ನಿರ್ವಹಿಸಬೇಕು.

ಗುರು ಉಪದೇಶ ಮಂತ್ರವೈದ್ಯ,
ಜಂಗಮ ಉಪದೇಶ ಶಸ್ತ್ರವೈದ್ಯ ನೋಡಾ
ಭವರೋಗವ ಕಳೆವ ಪರಿಯ ನೋಡಾ
ಕೂಡಲಸಂಗನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ

ಬದಲಾವಣೆಗೆ ಒಡ್ಡಿಕೊಳ್ಳಬೇಕು. ಬದಲಾವಣೆ ಆಗಬೇಕು, ಬದಲಾವಣೆ ತರಬೇಕು. ವ್ಯಕ್ತಿ ತಾನು ಬದಲಾವಣೆಯ ಹಂತಗಳನ್ನು ಕಂಡುಕೊಳ್ಳುತ್ತ ಸುತ್ತಣ ಹೆಜ್ಜೆಗಳನ್ನು ಬದಲಾಯಿಸುತ್ತ ಹೋಗಬೇಕಾಗುತ್ತದೆ. ವಿಷಸರ್ಪವು ಮೂರು ತಿಂಗಳಿಗೊಮ್ಮೆ ತನ್ನ ಪ್ರೆರೆ ಕಳಚುತ್ತದೆ. ಮತ್ತೆ ಹೊಸ ಪ್ರೆರೆ ಹೊಂದುತ್ತದೆ. ಆದರೆ ಮಾನವ ಬದಲಾವಣೆ ಆಗಬೇಕು. ಅದರ ಜೊತೆ ಬದುಕು ಸಾಗಬೇಕು. ಬದುಕು ನಿತ್ಯ ಚಲಾವಣೆ. ಸಮಾಜ ಸುಧಾರಕರು, ದಾರ್ಶನಿಕರು ಬಂದಾಗಲೆಲ್ಲ ಸಮಾಜವನ್ನು ತಿದ್ದಲು ಪ್ರಯತ್ನಿಸುತ್ತಾರೆ. ಅವರು ಪ್ರಯೋಗಗಳನ್ನು ಮಾಡುತ್ತಾರೆ. ಇವರ ಆಶಯ ಬದಲಾವಣೆ. ವ್ಯಕ್ತಿಯ ಬದಲಾವಣೆ. ಸಾಮಾಜಿಕವಾದ ಸುಧಾರಣೆಗಾಗಿ ಏನೆಲ್ಲ ಪ್ರಯತ್ನಿಸುತ್ತಾರೆ. ನಿರಂತರ ಪ್ರಕ್ರಿಯೆ ಅಂದರೆ ಸಮಾಜ ಸುಧಾರಣೆ. ಜನಮುಖಿಯಾದ ಪ್ರಯೋಗಗಳು. ಶರಣರು ವೈಯಕ್ತಿಕ ಜೀವನವನ್ನು ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡು ಪ್ರಯೋಗ ಮಾಡುತ್ತಾರೆ. ಆದರೆ ಅವರು ನಿರ್ಗಮಿಸಿದ ಮೇಲೆ ಮತ್ತದೇ ದಾರಿಗೆ ಸಮಾಜ ಬರುತ್ತದೆ. ದಾರ್ಶನಿಕರ ಆದರ್ಶಗಳನ್ನು ಮರೆಯುತ್ತಾರೆ. ಸತ್ಪುರುಷರು ಬದುಕಿದ್ದಾಗ ಸಮಾಜ ಸರಿಯಾಗಿರುತ್ತದೆ. ಅವರು ಬಯಲಾದ ಮೇಲೆ ಸಮಾಜ ಹಳೇ ಚಾಳಿಗೆ ಬರುತ್ತದೆ. ಆದರೆ ಅವರ ಪ್ರಯೋಗಗಳು ನಿರಂತರವಾಗಿರುತ್ತವೆ. ಜೀವಂತವಾಗಿರುತ್ತವೆ. ಸಾಯುವವರನ್ನು ಅವು ಬದುಕಿಸುತ್ತವೆ ಎಂದರು.